## ಪ್ರಶ್ನೆಪತ್ರಿಕೆ -೪ ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ ಅಂಕಗಳು : ೧೦೦

ಸೂಚನೆಗಳು : ಪ್ರಶ್ನೆಪತ್ರಿಕೆಯು ಎ,ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಯನ್ನು ಅನುಸರಿಸಿ ಉತ್ತರಗಳನ್ನುಬರೆಯಿರಿ.

### ಭಾಗ -'ಎ'

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೯*೧ =೯

೧. ಮಧುಪರ್ಕ ಎಂದರೇನು ?

೨.ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?

೩.ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು ?

೪. ದೇವನೂರರ 'ನನ್ನ ದೇವರು' ಯಾರು ?

೫. ಯಾವುದು ನಮ್ಮನ್ನು ಹಾಳು ಮಾಡುತ್ತವೆ ಎಂದು ಪ್ರೇಮಮತಿಯು ದುಷ್ಟಬುದ್ಧಿಗೆ ಹೇಳಿದನು ?

೬. ಅರ್ಜುನನನ್ನು ಗಾಂಡೀವಿ ಎಂದು ಕರೆಯಲು ಕಾರಣವೇನು ?

೭.ಬಸವಣ್ಣನವರು ಮರನನೇರಿದ ಮರ್ಕಟ ಎಂದು ಯಾವುದನ್ನು ಕರೆದಿದ್ದಾರೆ ?

೮. ಸದಾ ಚಿಮ್ಮುವ ಚಿಲುಮೆಯಾಗಬೇಕು ಏಕೆ ?

೯. ಪುಟ್ಟ ಮರಿಗಳು ಬಲೆಯಲ್ಲಿ ಸಿಲುಕಿದಾಗ ಪಾರಿವಾಳಗಳ ಜೋಡಿ ಏನು ಮಾಡಿದವು ?

ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧೦*೨=೨=

೧೦.ಅಂತರ್ ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು ?

೧೧. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?

೧೨. ಧರ್ಮಬುದ್ಧಿಗೆದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?

೧೩. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ ತಿಳಿಸಿ .

೧೪. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರ ದಾಸಿಮಯ್ಯನವರ ಅಭಿಪ್ರಾಯವೇನು ?

೧೫. ಒಡಲು ಅನುಭವಿಸುವ ಸಂಕಟಕೆ ಗಡಿಯಿಲ್ಲ ಏಕೆ ?

೧೬. ಎಚ್.ನರಸಿಂಹಯ್ಯನವರು ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲುದು ಎಂದು ಹೇಳಿದ್ದಾರೆ ?

೧೭. ಪಂಪ ತನ್ನ ಹೆಸರನ್ನು ಬಂಡೆಯ ಮೇಲೆ ಏಕೆ ಕೆತ್ತಿಸಿಕೊಳ್ಳಲಿಲ್ಲ ?

೧೮. ಕ್ರಿಯಾ ಸ್ವಾತಂತ್ರ್ಯ ಎಂದರೇನು?

೧೯. ಉಪ್ಪಿನ ಕುರಿತು ಇರುವ ಒಗಟನ್ನು ವಿವರಿಸಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.          ೪*೩=೧೨**

**೨೦." ಅವರ ಸಾದನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು . "**

**೨೧. "ಖಂಡವಿದೆಕೊ ,ಮಾಂಸವಿದೆಕೊ, ಗುಂಡಿಗೆಯ ಬಿಸಿರಕ್ತವಿದೆಕೊ "**

**೨೨. "'ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು "**

**೨೩. "ಅರಸುಗಳ ವಾಜಿಯಂ ಬಿಡು "**

**ಈ ಸಾಹಿತಿ /ಕವಿಗಳ ಸ್ಥಳ ,ಕಾಲ,ಕೃತಿ ,ಪ್ರಶಸ್ತಿ /ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.          ೨*೩=೬**

**೨೪. ಪು.ತಿ.ನ.**

**೨೫. ಪಂಪ**

**ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ.     ೧*೪=೪**

**ಕೊರಳ** -------------

------------------------

------------------------

------------------

------------------------

------------------**ಚಿಂತಿಸಿದ**

**ಅಥವಾ**

**ಮಾರಿಗೌತಣ** -----------

---------------------

----------------------

---------------------

----------------

-------------------**ಸಖನಾಣೆ**

**೨೭. ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು , ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.                    ೧*೪=೪**

**ಸುತ್ತಲು ಕವಿಯುವ ಕತ್ತಲೆಯೊಳಗೆ**
**ಪ್ರೀತಿಯ ಹಣತೆಯ ಹಚ್ಚೋಣ**
**ಬಿರುಗಾಳಿಗೆ ಹೊಯ್ದಾಡುವ ಹಡಗನು**
**ಎಚ್ಚರದಲಿ ಮುನ್ನಡೆಸೋಣ**

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೮. ಗೊರೂರರು ಶಾಲೆಗೆ ಹೋದಾಗ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಮೊದಲು ಹೇಗೆ ವರ್ತಿಸಿದರು?

ಅಥವಾ

ಗಾಂದಿ ಮತ್ತು ಖಾದಿಯ ಹಿರಿಮೆಯನ್ನು ಗೊರೂರರು ಅಮೆರಿಕದ ವಿದ್ಯಾರ್ಥಿಗಳಿಗೆ ಪರಿಚಯಿಸಿದ ಬಗೆ ವಿವರಿಸಿ.

೨೯. ಕಾಲಪಕ್ಷಿಯ ರೂಪುರೇಷೆಯನ್ನು ಮತ್ತು ಆಕಾಶದಲ್ಲಿ ಅದರ ಹಾರಾಟವನ್ನು ಕವಿ ಹೇಗೆ ವರ್ಣಿಸಿದ್ದಾರೆ ?

ಅಥವಾ

ಕಾಲದ ಪಕ್ಷಿಗೆ ಎಲ್ಲರೂ ಸಮಾನರು ಸಮರ್ಥಿಸಿ .

೩೦. ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೧*೪ =೪(೨+೨)

ಪ್ರಾರ್ಥನೆಯು ಪ್ರಬಲವಾದ ಬೇಡಿಕೆ. ಭಾವಪೂರ್ಣವಾದ ಬೇಡಿಕೆ.ಬಲವುಳ್ಳ ಬಯಕೆಯು ಫಲವನ್ನು ಪಡೆಯುವುದು. ತೀವ್ರ ಬೇಡಿಕೆಗೆ ತೀವ್ರ ಫಲ ದೊರಕುವುದು ಖಂಡಿತ. ಆದರೆ ಯಾರನ್ನು ಬೇಡಬೇಕು ? ಏಕೆಂದರೆ ಉಳ್ಳವನು ಕೊಡಬಲ್ಲ. ಇಲ್ಲದವರು ಕೊಡಲಾರರು .ಜಗದಲ್ಲಿ ಜಗದೊಡೆಯನೊಬ್ಬನೇ .ಮಾನವರ ಐಸಿರಿಯು ಮಿತಿಯುಳ್ಳದ್ದು. ಅವರು ಧನದಲ್ಲಿ ದೊಡ್ಡವರಾದರೂ ಮನದಲ್ಲಿ ಬಡವರು. ಭಗವಂತನೊಬ್ಬನೇ ದಯೆಯ ಆಗರ .ಕೃಪೆಯ ಸಾಗರ .ಆತನೊಲಿದರೆ ಕೊರಡು ಕೊನರುವುದು. ಬರಡು ಹಯನಹುದು.ವಿಷವೆಲ್ಲ ಅಮೃತವಹುದು.ಭಕ್ತಿಯಿಲ್ಲದೆ ಭಜನೆಗಿಂತ ಭಕ್ತಿಯುಳ್ಳ ಮೌನವೇ ಮೆಲು .

ಪ್ರಶ್ನೆಗಳು : ೧. ಯಾರನ್ನು ಏಕೆ ಬೇಡಬೇಕು ?

೨. ದೇವನೊಲಿದರೆ ಏನೆಲ್ಲ ಆಗುವುದು ?

## ಭಾಗ - 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೧೦*೧=೧೦

೩೧. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ---------

( ಎ) ೨೫ (ಬಿ)೧೦ (ಸಿ)೯ (ಡಿ)೧೩

೩೨. 'ಮಹೋನ್ನತ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ:

(ಎ) ಗುಣಸಂಧಿ (ಬಿ) ಆದೇಶ ಸಂಧಿ (ಸಿ)ಸವರ್ಣದೀರ್ಘಸಂಧಿ (ಡಿ) ವೃದ್ಧಿಸಂಧಿ

೩೩. 'ಅನೇಕ ಉಪ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು'

(ಎ) ಭಾವಸೂಚಕ (ಬಿ) ಪ್ರಶ್ನಾರ್ಥಕ (ಸಿ)ಅರ್ಧವಿರಾಮ (ಡಿ)ಪೂರ್ಣವಿರಾಮ

೩೪. 'ಕುವರಂ' ಈ ಪದದಲ್ಲಿರುವ ವಿಭಕ್ತಿಯಿದು :

(ಎ) ದ್ವಿತೀಯಾ (ಬಿ)ತೃತೀಯಾ (ಸಿ) ಸಪ್ತಮಿ (ಡಿ) ಪ್ರಥಮಾ

೩೫. 'ಸೂರ್ಯಚಂದ್ರರು ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

(ಎ) ತತ್ಪುರುಷ (ಬಿ)ಗಮಕ (ಸಿ) ದ್ವಂದ್ವ (ಡಿ) ಕ್ರಿಯಾ

೩೬. 'ಕನ್ನಡಿಗ ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ)ತದ್ಧಿತಾಂತ ಅವ್ಯಯ ಬಿ)ಕೃದಂತ ಭಾವನಾಮ ಸಿ) ಕೃದಂತಾವ್ಯಯ ಡಿ) ತದ್ಧಿತಾಂತ ಭಾವನಾಮ

೩೭. 'ಶ್ರೀನಿವಾಸ' ಪದವು ಈ ನಾಮಪದದ ಉದಾಹರಣೆಯಾಗಿದೆ.

ಎ)ಅಂಕಿತನಾಮ ಬಿ)ಅನ್ವರ್ಥಕ ನಾಮ ಸಿ)ರೂಢನಾಮ ಡಿ) ಗುಣವಾಚಕ

೩೮. 'ರಕ್ಷಿಯಿಡಲಿ 'ಪದವು ಈ ಮಾದರಿಯ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ.

(ಎ)ಸಂಭಾವನಾರ್ಥಕ (ಬಿ)ನಿಷೇಧಾರ್ಥಕ (ಸಿ)ವಿಧ್ಯರ್ಥಕ (ಡಿ)ಸಾಮಾನ್ಯಾರ್ಥಕ

೩೯. 'ಕಾಯ್ದೆ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ

(ಎ) ಅರಬ್ಬೀ (ಬಿ) ಉರ್ದು (ಸಿ)ಪೋರ್ಚುಗೀಸ್ (ಡಿ)ಫಾರ್ಸಿ

೪೦.'ನಂಬಿಗಿಲ್ಲ ' ಪದದ ಗ್ರಾಂಥಿಕರೂಪವಿದು :

(ಎ) ನಂಬಿಕೆ ಇಲ್ಲ (ಬಿ) ನಂಬಿ ಇಲ್ಲ (ಸಿ) ನೆಮ್ಮದಿ ಇಲ್ಲ (ಡಿ)ನೆಂಬಿಕೆ ಇಲ್ಲ

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. ೪*೧=೪

೪೧. ಪರಸಿ :ಹರಸಿ :: ಪಸುರು : __________

೪೨. ಯುಗಯುಗ :ದ್ವಿರುಕ್ತಿ :: ಗುಜುಗುಜು : _______

೪೩.ಐವತ್ತು : ಸಂಖ್ಯಾವಾಚಕ : :ಅಷ್ಟು : _____

೪೪:ವಂದ್ಯಾ : ಬಂಜೆ : ಪ್ರಸಾದ :________

೪೫ .ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣವಿಭಾಗ ಮಾಡಿ,ಛಂದಸ್ಸಿನ ಹೆಸರು ಬರೆಯಿರಿ. ೧*೩=೩

ಮತಿಗೆಟ್ಟು ತಸ್ಕರಸ್ಯಾ
ನೃತ ಬಲಂ ಎನಿಪ ವಾಕ್ಯವಂ ನೆನೆಯುತ್ತುಂ

ಅಥವಾ

೪೬. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣ ಬರೆದು ಸಮನ್ವಯಿಸಿ . ೧*೩ =೩
'ಶೋಕದುಲ್ಕೆ'
ಅಥವಾ
'ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ '

## ಭಾಗ -'ಸಿ'

೪೭. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೩ =೩
* ದೇಶ ಸುತ್ತಿ ನೋಡು ಕೋಶ ಓದಿ ನೋಡು
*ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ .
* ಕೈ ಕೆಸರಾದರೆ ಬಾಯಿ ಮೊಸರು

೪೮. ನಿಮ್ಮನ್ನು ಬಾಗಲಕೋಟೆಯ ನೂತನ ವಿದ್ಯಾಸಂಸ್ಥೆಯಲ್ಲಿ ೧೦ ನೆ ತರಗತಿಯಲ್ಲಿ ಓದುತ್ತಿರುವ 'ಅಭಿನವ್' ಎಂದು ಭಾವಿಸಿ ಅನಾರೋಗ್ಯದ ಕಾರಣ ನೀಡಿ ಎರಡು ದಿನ ರಜೆ ನೀಡುವಂತೆ ಕೋರಿ ನಿಮ್ಮ ವರ್ಗದ ಶಿಕ್ಷಕರಿಗೆ ರಜಾ ಅರ್ಜಿ ಬರೆಯಿರಿ. ೧*೫=೫
ಅಥವಾ

ನಿಮ್ಮನ್ನು ದಾವಣಗೆರೆಯಲ್ಲಿ ೧೦ ನೇ ತರಗತಿಯಲ್ಲಿ ಓದುತ್ತಿರುವ ' ಪರಿಣಿತ ' ಎಂದು ಭಾವಿಸಿ ಹಾವೇರಿಯಲ್ಲಿ ವಾಸಿಸುತ್ತಿರುವ ನಿಮ್ಮ ಅಮ್ಮ 'ಕುಸುಮಾ' ರಿಗೆ ನಿಮ್ಮ ಪರೀಕ್ಷೆಯ ಸಿದ್ಧತೆ ಕುರಿತು ಪತ್ರ ಬರೆಯಿರಿ.

೪೯. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. ೧*೫ =೫
* ವರದಕ್ಷಿಣೆ ಸಮಸ್ಯೆ ಮತ್ತು ಪರಿಹಾರ
* ವೃತ್ತಪತ್ರಿಕೆಗಳ ಮಹತ್ವ
* ಜಲಸಂರಕ್ಷಣೆ

****************************** ಕಾಯಕವೇ ಕೈಲಾಸ ******************************

mamatabhagwat1@gmail.com